

ಬೆಂಗಳೂರಿನ ಭಕ್ತಸಮ್ಮೇಳನವನ್ನು ಪೂಜ್ಯ ಸ್ವಾಮಿ ಸ್ಮರಣಾನಂದಜಿ ಉದ್ಘಾಟಿಸುತ್ತಿರುವುದು. ಎಡದಿಂದ ಪೂಜ್ಯರಾದ ಸ್ವಾಮಿ ಗೀತಾನಂದಜಿ, ಸ್ವಾಮಿ ಗೌತಮಾನಂದಜಿ ಮತ್ತು ಸ್ವಾಮಿ ಹರ್ಷಾನಂದಜಿ.

☛ **ಬೆಂಗಳೂರಿನ** ಶ್ರೀರಾಮಕೃಷ್ಣ ಮಠವು ತನ್ನ ಶತಮಾನೋತ್ಸವದ ಕಡೆಯ ಹಂತವಾಗಿ ಅಖಿಲ ಕರ್ನಾಟಕ ರಾಮಕೃಷ್ಣ–ವಿವೇಕಾನಂದ ಭಕ್ತ ಸಮ್ಮೇಳನವನ್ನು ೩೦.೧೨.೨೦೦೫ ರಿಂದ ೧.೧.೨೦೦೬ರವರೆಗೆ ಆಯೋಜಿಸಿತ್ತು. ಭವ್ಯವಾದ ಸಭಾ ಗೃಹದಲ್ಲಿ ಪುಷ್ಪಗಳಿಂದ ಸುಂದರವಾಗಿ ಅಲಂಕೃತಗೊಂಡ ದಿವ್ಯ ತ್ರಯರ ಭಾವಚಿತ್ರಗಳು ಶೋಭಿಸುತ್ತಿದ್ದವು. ಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗೀತಾನಂದಜಿ ಮಹಾರಾಜ್, ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಹಾಗೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮಹಾರಾಜ್ ಇವರೆಲ್ಲ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನವನ್ನು ನೀಡಿದರು. ರಾಮಕೃಷ್ಣ ಮಠದ ಅನೇಕ ಹಿರಿಯ ಸನ್ಯಾಸಿಗಳೂ ಖಾಸಗಿ ಆಶ್ರಮ/ಸಂಸ್ಥೆಗಳ ಸನ್ಯಾಸಿಗಳೂ ಉಪಸ್ಥಿತರಿದ್ದರು. ಬೆಂಗಳೂರಿನಿಂದ ಬಂದಿದ್ದ ೨೦೦೦ಕ್ಕೂ ಮಿಕ್ಕ ಭಕ್ತಾದಿಗಳಿಗೆ ಊಟದ ಹಾಗೂ ಹೊರಪ್ರದೇಶಗಳಿಂದ ಬಂದಿದ್ದ ೧೯೦ ಜನ ಭಕ್ತರಿಗೆ ಊಟ ಮತ್ತು ವಸತಿ ವ್ಯವಸ್ಥೆಗಳನ್ನು ಮಾಡಲಾಗಿತ್ತು. ವಿದ್ವತ್ ಪೂರ್ಣ ಉಪನ್ಯಾಸಗಳು, ಧ್ಯಾನ, ಪ್ರಾರ್ಥನೆಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಯಕ್ಷಗಾನ, ನಾಟಕ ಮುಂತಾದುವುಗಳನ್ನು ಸಹ ನಡೆಸಲಾಯಿತು.

☛ **ಭಾರತಶಾಸ್ತ್ರದ (Indology)** ಉನ್ನತ ವ್ಯಾಸಂಗ ಹಾಗೂ ಸಂಶೋಧನೆಗಾಗಿ ಸ್ವಾಮಿ ರಂಗನಾಥಾನಂದರ ಅಧ್ಯಯನ ಪೀಠವನ್ನು ಕೊಲ್ಕತಾದ ರಾಮಕೃಷ್ಣ ಮಿಷನ್ ಸಾಂಸ್ಕೃತಿಕ

# ಸುದ್ದಿಸಂಚಯ

ಸಂಸ್ಥೆಯಲ್ಲಿ ೨೦೦೫ರ ಡಿಸೆಂಬರ್ ೧೭ರಂದು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಉಪಸ್ಥಿತರಿದ್ದರು.

☛ ೨೦೦೫ರ ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಅಲಸೂರಿನ ರಾಮಕೃಷ್ಣ ಮಠವು ಶಾಲೆಯ ಮಕ್ಕಳಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳನ್ನು ಏರ್ಪಡಿಸಿತ್ತು. ಬೆಂಗಳೂರಿನ ೧೬ ಶಾಲೆಗಳ ೪೦೯ ವಿದ್ಯಾರ್ಥಿಗಳು ಇವುಗಳಲ್ಲಿ ಭಾಗವಹಿಸಿ ಬಹುಮಾನವಾಗಿ ಪುಸ್ತಕ ಹಾಗೂ ಅಭಿನಂದನಾ ಪತ್ರವನ್ನು ಪಡೆದುಕೊಂಡರು.

☛ **ಬೆಳಗಾವಿಯ** ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಶ್ರೀಮಾತೆ ಶಾರದಾದೇವಿಯವರ ಜಯಂತಿಯನ್ನು ಸೇವಾಕಾರ್ಯಗಳ ಮೂಲಕ ಆಚರಿಸಲಾಯಿತು.



ಬೆಳಗಾವಿಯ ಆಶ್ರಮದಲ್ಲಿ "ನಾರಾಯಣ ಸೇವೆ"

☛ **ಬೆಂಗಳೂರಿನ** ರಾಮಕೃಷ್ಣ ಮಠದ ವಿವೇಕಾನಂದ ಬಾಲಕ ಸಂಘ ಮತ್ತು ವಿವೇಕಾನಂದ ಯುವಕ ಸಂಘಗಳು ಬಾಲಕರ ಬೌದ್ಧಿಕ ಪ್ರತಿಭೆಗಳನ್ನು ಹೊರತರಲು 'ವಿಜ್ಞಾನ ವಿಸ್ಮಯ' ಎಂಬ ಒಂದು ವಿಜ್ಞಾನ. ವಸ್ತುಪ್ರದರ್ಶನವನ್ನು ೨೦೦೫ರ ನವೆಂಬರ್ ೨೬ ಮತ್ತು ೨೭ರಂದು ಏರ್ಪಡಿಸಿದ್ದವು. ಈ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಹಲವಾರು ವಿಭಾಗಗಳಿದ್ದು ಅವುಗಳಲ್ಲಿ ಮುಖ್ಯವಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಖಗೋಳಶಾಸ್ತ್ರ, ಎಲೆಕ್ಟ್ರಾನಿಕ್ಸ್ ವಿಭಾಗಗಳು ಗಮನ ಸೆಳೆಯುವಂತಿದ್ದವು. ಇಲ್ಲಿ



ವಿಜ್ಞಾನ ಪ್ರದರ್ಶನವನ್ನು ವೀಕ್ಷಿಸುತ್ತಿರುವ ಸ್ವಾಮಿ ಹರ್ಷಾನಂದಜಿ

ಪ್ರದರ್ಶಿತವಾದ ಎರಡು ವಿಶೇಷ ವಿಭಾಗಗಳನ್ನು ವೀಕ್ಷಕರು ಮೆಚ್ಚಿದರು. ಎರಡು ದಿನಗಳ ಈ ಪ್ರದರ್ಶನಕ್ಕೆ ಸುಮಾರು ೩೦೦೦ಕ್ಕೂ ಹೆಚ್ಚು ವೀಕ್ಷಕರು ಭೇಟಿ ನೀಡಿದ್ದರು. ಇದರಲ್ಲಿ ೧೨ ಶಾಲೆಗಳ ಸುಮಾರು ೧೫೦೦-೧೬೦೦ ಮಕ್ಕಳು ತಮ್ಮ ಶಿಕ್ಷಕರೊಂದಿಗೆ ಭೇಟಿ ನೀಡಿದ್ದರು. ಹೀಗೆ ಈ ವಿಜ್ಞಾನ ವಿಸ್ಮಯ ವಸ್ತು ಪ್ರದರ್ಶನ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

## ರಾಮಕೃಷ್ಣ ಮಿಷನ್ನಿನ ೨೦೦೪-೦೫ನೇ ಸಾಲಿನ ಆಡಳಿತ ಮಂಡಳಿಯ ವರದಿ

**ರಾ**ಮಕೃಷ್ಣ ಮಿಷನ್ನಿನ ೯೬ನೇ ವಾರ್ಷಿಕ ಸಭೆಯು ೨೦೦೫ರ ೧೮ನೇ ಡಿಸೆಂಬರ್ ಭಾನುವಾರ ಮಧ್ಯಾಹ್ನ ೩.೩೦ ಗಂಟೆಗೆ ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ನಡೆಯಿತು.

ಹಿಂದೂ ಮಹಾಸಾಗರದಲ್ಲಿ ಉಂಟಾದ ಭೀಕರ ಸುನಾಮಿ ಅಲೆಗಳಿಂದ ತತ್ತರಿಸಿದ ಅಂಡಮಾನ್ ದ್ವೀಪ, ತಮಿಳುನಾಡು, ಕೇರಳ ಹಾಗೂ ಶ್ರೀಲಂಕಾಗಳಲ್ಲಿ ರಾಮಕೃಷ್ಣ ಮಿಷನ್ ಕ್ಷಿಪ್ರಗತಿಯಲ್ಲಿ ಬೃಹತ್ ಪ್ರಮಾಣದ ಪರಿಹಾರ ಕಾರ್ಯಾಚರಣೆಯನ್ನು ಕೈಗೊಂಡಿತು. ಸಾವಿರಾರು ಸಂತ್ರಸ್ತರಿಗೆ ಊಟೋಪಚಾರಗಳೇ ಅಲ್ಲದೆ, ಆಹಾರಪದಾರ್ಥಗಳನ್ನು ವಿತರಿಸಲಾಯಿತು. ವೈದ್ಯೋಪಚಾರ ಮತ್ತು ತಾತ್ಕಾಲಿಕ ಷೆಡ್‌ಗಳ ವ್ಯವಸ್ಥೆಯೊಂದಿಗೆ ಅತ್ಯಗತ್ಯ ಸಾಮಗ್ರಿಗಳಾದ ಬಟ್ಟೆ, ಪಾತ್ರೆಗಳು, ಚಾಪೆಗಳು ಮುಂತಾದುವುಗಳನ್ನು ಚೆನ್ನೈ, ಕಾಲಡಿ ಮತ್ತು ಬಟ್ಟಿಕಲೋವದಲ್ಲಿನ ಶಾಖೆಗಳ ಮೂಲಕ ವಿತರಿಸಲಾಯಿತು. ಸುನಾಮಿ ಅಲೆಗಳಿಂದ ಅತ್ಯಂತ ದಾರುಣವಾಗಿ ತತ್ತರಿಸಿಹೋದ ಶ್ರೀಲಂಕಾದ ಬಟ್ಟಿಕಲೋವದ ಬೆಸ್ತರಿಗೆ ಫೈಬರ್ ಗ್ಲಾಸ್ ದೋಣಿಗಳು, ಮೀನು ಹಿಡಿಯುವ ಬಲೆಗಳು ಹಾಗೂ ಇತರ ಸಾಮಗ್ರಿಗಳನ್ನು ನೀಡಲಾಯಿತು. ನವೆಂಬರ್ ೨೦೦೫ರವರೆಗೆ ೪೮೭ ದೋಣಿಗಳನ್ನು ವಿತರಿಸಲಾಗಿದ್ದು ೩೨೪ ಮನೆಗಳ ನಿರ್ಮಾಣವನ್ನು ಕೈಗೊಳ್ಳಲಾಯಿತು. ಇವುಗಳಲ್ಲಿ ೧೫೦ ಮನೆಗಳು ಪೂರ್ಣಗೊಂಡಿದ್ದು ಅವುಗಳನ್ನು ಸುನಾಮಿ ಸಂತ್ರಸ್ತರಿಗೆ ನೀಡಲಾಗಿದೆ. ೩ ಸಮುದಾಯ ಭವನಗಳು, ಶಾಲೆ ಹಾಗೂ ಆಶ್ರಯಧಾಮಗಳ ನಿರ್ಮಾಣದ ಕೆಲಸ ಪ್ರಗತಿಯಲ್ಲಿದೆ. ಸುನಾಮಿಯಿಂದ ದಿಕ್ಕಾಪಾಲಾದ ಮಕ್ಕಳನ್ನು ಪೋರ್ಟ್ ಬ್ಲೇರ್‌ನ ನಮ್ಮ ಶಾಖೆಯ ಹಾಸ್ಟೆಲ್‌ನಲ್ಲಿ ಸೇರಿಸಿಕೊಳ್ಳಲಾಗಿದೆ. ಈ ಪರಿಹಾರ ಕಾರ್ಯಾಚರಣೆಗಳಿಗಾಗಿ ೩೧ ಮಾರ್ಚ್ ೨೦೦೫ರವರೆಗೆ ೫.೨೨ ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗದ ಶಿಫಾರಸ್ಸಿನ ಮೇರೆಗೆ ರಾಮಕೃಷ್ಣ ಮಿಷನ್‌ನಿಂದ ಸಂಚಾಲಿತವಾದ ರಾಮಕೃಷ್ಣ ಮಿಷನ್ ವಿವೇಕಾನಂದ ಎಜುಕೇಷನ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ್ನು 'ಪರಿಗಣಿತ ವಿಶ್ವವಿದ್ಯಾಲಯ' ಎಂದು ಘೋಷಿಸಿದೆ. ಮೊದಲಿನ 'ವಿಶೇಷ ಪ್ರಾಧಾನ್ಯ ನೀಡಲಾಗಿರುವ ಕ್ಷೇತ್ರ'ಗಳನ್ನು ಗುರುತಿಸಲಾಗಿದೆ: ೧. ವೈಕಲ್ಯತೆಗಳ ನಿರ್ವಹಣೆ ಮತ್ತು ವಿಶೇಷ ಶಿಕ್ಷಣ, ೨. ಗಿರಿಜನ ಕ್ಷೇಮಾಭಿವೃದ್ಧಿಯನ್ನು ಒಳಗೊಂಡ ಸಮಗ್ರ ಗ್ರಾಮೀಣಾಭಿವೃದ್ಧಿ, ೩. ಭಾರತೀಯ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಪರಂಪರೆ ಮತ್ತು ಮೌಲ್ಯ ಶಿಕ್ಷಣ, ೪. ಪರಿಹಾರ ಮತ್ತು ಪುನರ್ವಸತಿ ಯೋಜನೆಯನ್ನು ಒಳಗೊಂಡ ಆಪತ್ಕಾಲೀನ ನಿರ್ವಹಣೆ.

ಪ್ರಸಕ್ತ ಸಾಲಿನಲ್ಲಿ 'ರಾಮಕೃಷ್ಣ ಮಿಷನ್ ಸ್ವಾಮಿ ವಿವೇಕಾನಂದರ ಪೂರ್ವಜರ ಮನೆ ಮತ್ತು ಸಾಂಸ್ಕೃತಿಕ ಕೇಂದ್ರ' ಎಂಬ ಹೆಸರಿನ ನೂತನ ಶಾಖಾ ಕೇಂದ್ರವೊಂದನ್ನು ಸ್ವಾಮಿ ವಿವೇಕಾನಂದರು ಜನ್ಮತಾಳಿದ ನಿವೇಶನದಲ್ಲಿ ಪ್ರಾರಂಭಿಸಲಾಯಿತು.

ವೈದ್ಯಕೀಯ ಕ್ಷೇತ್ರದಲ್ಲಿ ಈ ಸಾಲಿನಲ್ಲಿ ವಿಶೇಷವಾಗಿ ಉಲ್ಲೇಖಯೋಗ್ಯವಾಗಿರುವ ಸಂಗತಿಗಳು ಹೀಗಿವೆ: ಪಾಟ್ನಾ ಶಾಖೆಯ ಚಿಕಿತ್ಸಾಲಯದಲ್ಲಿ ಕಣ್ಣಿನ ವಿಭಾಗವನ್ನು, ಲಕ್ನೋ ಶಾಖೆಯ ಪಾಲಿಕ್ಲಿನಿಕ್‌ನಲ್ಲಿ ಟೆಲಿಮೆಡಿಸಿನ್ ಸೇವಾವಿಭಾಗವನ್ನು ಹಾಗೂ ಬೃಂದಾವನ ಸೇವಾಶ್ರಮದಲ್ಲಿ ಬ್ಲಡ್ ಬ್ಯಾಂಕ್‌ನ್ನು ಆರಂಭಿಸಲಾಗಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಒಂದು ಸ್ವತಂತ್ರ ಸಂಸ್ಥೆಯಾದ ಭಾರತದ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಪ್ರತ್ಯಾಯಾನ ಪರಿಷತ್ (National Assessment and Accredition Council of India)

ಪಶ್ಚಿಮ ಬಂಗಾಳದ ನಮ್ಮ ಶಾರದಾಪೀಠ ಶಾಖೆಯ ವಿದ್ಯಾಮಂದಿರಕ್ಕೆ ಎ+ (ಗಳಿಸಿದ ಅಂಕಗಳು: ೯೦%-೯೫%) ಶ್ರೇಣಿಯನ್ನು ಘೋಷಿಸಿದೆ. ಚೆನ್ನೈ ವಿದ್ಯಾಪೀಠ ಶಾಖೆಯ ವಿವೇಕಾನಂದ ಕಾಲೇಜ್‌ಗೆ ೨೦೦೪-೦೫ ಶೈಕ್ಷಣಿಕ ವರ್ಷದಿಂದ ಮದರಾಸು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಎಲ್ಲ ಕೋರ್ಸ್‌ಗಳಿಗೂ ಸ್ವಾಯತ್ತತೆಯನ್ನು ನೀಡಲಾಗಿದೆ. ಈ ಕಾಲೇಜಿನ ವನಸ್ಪತಿ ವಿಜ್ಞಾನ ಮತ್ತು ವನಸ್ಪತಿ ಬಯೋಟೆಕ್ನಾಲಜಿ ವಿಭಾಗದ ಪಾಚಿ (ಆಲ್ಗೇ) ಬಯೋಟೆಕ್ನಾಲಜಿ ಘಟಕವು ನಾಲ್ಕು ಭಾರತೀಯ ಕೈಗಾರಿಕೆಗಳ ಸಹಯೋಗದೊಡನೆ ನೀರಿನ ಶುದ್ಧೀಕರಣಕ್ಕಾಗಿ ಮತ್ತು ಒಂದು ಜಪಾನಿ ಕಂಪನಿಯೊಂದಿಗೆ ಪಾಲಿಮರ್ ಬಯೋಡಿಗ್ರೇಡೇಷನ್‌ಗಾಗಿ ಕೆಲಸ ಮಾಡಲು ಒಪ್ಪಂದವನ್ನು ಮಾಡಿಕೊಂಡಿದೆ.

ಗ್ರಾಮೀಣ ವಿಕಾಸ ಕಾರ್ಯದಲ್ಲಿ ತೊಡಗಿಸಿಕೊಂಡಿರುವ (ಕೊಲ್ಕತಾದ) ನರೇಂದ್ರಪುರದಲ್ಲಿರುವ ಲೋಕಶಿಕ್ಷಾ ಪರಿಷತ್‌ನ ಜನ ಶಿಕ್ಷಣ ಸಂಸ್ಥಾನಕ್ಕೆ ಪಶ್ಚಿಮ ಬಂಗಾಳದ ಹಾಗೂ ಈಶಾನ್ಯ ರಾಜ್ಯಗಳಲ್ಲಿರುವ ಇಂತಹ ಘಟಕಗಳಿಗೆ ಮಾರ್ಗದರ್ಶನ ನೀಡುವ ಅಗ್ರೇಸರ ಘಟಕದ ಮಾನ್ಯತೆ ನೀಡಲಾಗಿದೆ. ಕೃಷಿ ಮತ್ತು ಕೃಷಿಸಂಬಂಧಿ ಕ್ಷೇತ್ರಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಣಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯದ ವಿಸ್ತರಣಾ ಕಾರ್ಯಕ್ರಮಗಳ ಸುಧಾರಣೆಯಲ್ಲಿ ರಾಜ್ಯ ಸರ್ಕಾರಕ್ಕೆ ಒತ್ತಾಸೆಯಾಗಿರುವಂತೆ ಲೋಕಶಿಕ್ಷಾ ಪರಿಷತ್‌ನ ಕೃಷಿ ತರಬೇತಿ ಕೇಂದ್ರವನ್ನು, ರಾಜ್ಯ ಕೃಷಿ ನಿರ್ವಹಣಾ ಮತ್ತು ವಿಸ್ತರಣಾ ತರಬೇತಿ ಸಂಸ್ಥೆ (State Agricultural Management and Extension Training Institute–SAMETI) ಎಂದು ಹೆಸರಿಸಿದೆ. ಭಾರತದ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಸಂವರ್ಧನೆಯಲ್ಲಿ ಲೋಕಶಿಕ್ಷಾ ಪರಿಷತ್‌ನ ಮೇದಿನೀಪುರದ ಡಿಮಾಂಡ್ ಡ್ರಿವನ್ ಸ್ಯಾನಿಟೇಷನ್ ಸ್ಟ್ರಾಟಜಿಯನ್ನು ಉತ್ಕೃಷ್ಟ ನಮೂನೆ (Role Model) ಎಂದು ಪರಿಗಣಿಸಲಾಗಿದೆ. ಭಾರತ ಸರ್ಕಾರದ ಗ್ರಾಮೀಣ ವಿಕಾಸದ ಅಡಿಯಿರುವ ಧಾರಣ ಅಥವಾ ಸಾಮರ್ಥ್ಯ ಅಭಿವೃದ್ಧಿಯ ಮುಖ್ಯ ಘಟಕವಾದ ಕುಡಿಯುವ ನೀರಿನ ಪೂರೈಕೆ ವಿಭಾಗವು ಸಂಪೂರ್ಣ ಸ್ವಚ್ಛತೆಯ ಪ್ರಚಾರ ಕಾರ್ಯಕ್ರಮಕ್ಕೆ ಆಯ್ದ ನಾಲ್ಕು ಪ್ರಮುಖ ಸಂಪನ್ಮೂಲ ಸಂಸ್ಥೆಗಳಲ್ಲಿ ಒಂದನ್ನಾಗಿ ೨೦೦೪-೦೫ ಸಾಲಿನಲ್ಲಿ ಲೋಕಶಿಕ್ಷಾ ಪರಿಷತ್ತನ್ನು ಪರಿಗಣಿಸಿದೆ.

ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಉಲ್ಲೇಖಯೋಗ್ಯವಾದ ಸಂಗತಿಗಳು ಹೀಗಿವೆ: ಆಂಧ್ರ ಪ್ರದೇಶದ ಕಡಪ, ಝಾರ್‌ಖಂಡ್‌ನ ಘಾಟ್‌ಶಿಲಾ ಹಾಗೂ ಜರ್ಮನಿಯ ಬಾನ್ ಸಮೀಪದಲ್ಲಿರುವ ಬಿಂಡ್‌ವಿಡೆ ಈ ಸ್ಥಳಗಳಲ್ಲಿ ನೂತನ ಶಾಖೆಗಳ ಪ್ರಾರಂಭ; ಪಶ್ಚಿಮ ಬಂಗಾಳದ ಮೇಖಲೀಗಂಜ್ ಆಶ್ರಮದಲ್ಲಿ ಶಿಶುವಿಹಾರ ಶಾಲೆಯ ಕಟ್ಟಡ. ಕೇರಳದ ಕಾಲಡಿ ಕೇಂದ್ರದಲ್ಲಿ ಶಾಲಾ ಕಟ್ಟಡ ಹಾಗೂ ಬೆಂಗಳೂರಿನ ಹಲಸೂರು ಆಶ್ರಮದ ಚಿಕಿತ್ಸಾಕೇಂದ್ರ ಭವನ—ಇವುಗಳ ಉದ್ಘಾಟನೆ.

ಈ ಸಾಲಿನಲ್ಲಿ ದೇಶದ ಹಲವಾರು ಭಾಗಗಳಲ್ಲಿ ೧೩.೦೫ ಕೋಟಿ ರೂಗಳ ವೆಚ್ಚದಲ್ಲಿ ವ್ಯಾಪಕವಾದ ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಮಿಷನ್ ಕೈಗೊಂಡಿತ್ತು. ಸುತ್ತಮುತ್ತಲ ೨,೧೮೦ ಗ್ರಾಮಗಳಲ್ಲಿನ ೨.೨ ಲಕ್ಷ ಕುಟುಂಬಗಳಿಗೆ ಸೇರಿದ ಸುಮಾರು ೮.೯೭ ಲಕ್ಷ ಜನರು ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ.

ಜನತೆಯ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ೩.೩೬ ಕೋಟಿ ರೂ.ಗಳನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣವೇತನ (Scholarships); ವೃದ್ಧರು, ರೋಗಿಗಳು ಮತ್ತು ಅನಾಥರಿಗೆ ಧನ ಸಹಾಯ –ಇವುಗಳಿಗಾಗಿ ಖರ್ಚುಮಾಡಲಾಯಿತು.

೧೦ ಆಸ್ಪತ್ರೆಗಳು, ೧೩೧ ಚಿಕಿತ್ಸಾಲಯಗಳು ಮತ್ತು ಸಂಚಾರಿ ಚಿಕಿತ್ಸಾಲಯಗಳ ಮೂಲಕ ೬೬.೧೦ ಲಕ್ಷಕ್ಕೂ ಹೆಚ್ಚು ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಯಿತು. ಇದಕ್ಕೆ ತಗುಲಿದ ಒಟ್ಟು ಖರ್ಚು ೩೯.೫೯ ಕೋಟಿ ರೂ.ಗಳು.

ಬಾಲವಿಹಾರದಿಂದ ಹಿಡಿದು ಸ್ನಾತಕೋತ್ತರ ಘಟ್ಟದವರೆಗೆ ವರೆಗಿನ ೧.೮೬ ಲಕ್ಷ ಜನ ವಿದ್ಯಾರ್ಥಿಗಳು ನಮ್ಮ ಶಿಕ್ಷಣ ಸಂಸ್ಥೆಗಳ ಪ್ರಯೋಜನ ಪಡೆದಿರುವರು. ಇವರಲ್ಲಿ ೬೪, ೦೦೦ ಸಾವಿರಕ್ಕೂ ಹೆಚ್ಚಿನವರು ವಿದ್ಯಾರ್ಥಿನಿಯರು. ೯೨.೬೬ ಕೋಟಿ ರೂ.ಗಳನ್ನು ಶಿಕ್ಷಣ ಕಾರ್ಯಗಳಿಗಾಗಿ ವಿನಿಯೋಗಿಸಲಾಯಿತು.

ಗ್ರಾಮೀಣ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು; ಈ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಒಟ್ಟು ಹಣ ೧೧.೬೩ ಕೋಟಿ ರೂ.ಗಳು.

**ನಿಷ್ಠೆಯಿಂದ ನಮ್ಮೊಂದಿಗೆ ಕೆಲಸ ಮಾಡುತ್ತಿರುವ ನೌಕರರಿಗೆ, ಸದಸ್ಯರಿಗೆ, ಸಹಯೋಗಿಗಳಿಗೆ, ಭಕ್ತರಿಗೆ, ಅಭಿಮಾನಿಗಳಿಗೆ, ಹಾಗೂ ಹಿತೈಷಿಗಳಿಗೆ ನಾವು ಹೃತ್ಪೂರ್ವಕ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ವಿಶ್ವದೆಲ್ಲೆಡೆ ಶಾಂತಿ, ಸೌಹಾರ್ದತೆಗಳನ್ನು ತ್ಯಾಗ ಮತ್ತು ಸೇವೆಯ ಮೂಲಕ ನೆಲೆನಿಲ್ಲಿಸುವಲ್ಲಿ ನಾವು ಮತ್ತಷ್ಟು ಪ್ರಯತ್ನಿಸುವಂತೆ ದಿವ್ಯತ್ರಯರು ನಮಗೆ ಕೃಪೆಗೈಯಲಿ ಎಂದು ಅವರನ್ನು ಪ್ರಾರ್ಥಿಸುತ್ತೇವೆ.**

ಸ್ವಾಮಿ ಸ್ಮರಣಾನಂದ
ಪ್ರಧಾನ ಕಾರ್ಯದರ್ಶಿ